ಬಂಡಾಯದ ಮಧ್ಯದಲ್ಲಿ ಬರೆಯುತ್ತಿದ್ದಾರೆ. ಮತ್ತೆ ಇವರೆಲ್ಲರ ಅನುಭವಗಳು ವಿಶಿಷ್ಟವಾಗಿವೆ. ಆದರೆ ಬದುಕಿಗೆ ನಿಷ್ಠವಾಗಿರುವ ರೀತಿಯಲ್ಲಿ ಬರೆಯುವುದು ಸೂಕ್ತ ಅಂತ ನನ್ನ ಅನಿಸಿಕೆ.

ಮತ್ತೊಂದು, ಸಣ್ಣಕತೆಯಲ್ಲಿ ಕಥೆ ಗೌಣವಾಗಿರುವುದು ಇಂದಿನ ಹಲವು ಕಥೆಗಳಲ್ಲಿ ಕಂಡುಬರ್ತದೆ. ಕಥೆ ಎಂದಮೇಲೆ ಕಥೆ ಇರಲೇಬೇಕು. ಕಥೆಯಲ್ಲಿ ಕಥೆಗೇ ಪ್ರಾಮುಖ್ಯತೆ ಇಲ್ಲದಿದ್ದರೆ ನನ್ನ ಮಟ್ಟಿಗೆ ಅದು ಕಥೆ ಅಲ್ಲ. ಮತ್ತು ತುಂಬ ಅನುಭವಗಳನ್ನು ಒಮ್ಮೆಲೇ ಹೇಳಿಕೊಳ್ಳುವ ಅವಸರ ಕಾಣುತ್ತದೆ.

ಈ ನಡುವೆ ಮಂಗಳೂರು ಕಡೆಗಳಲ್ಲಿ ಕೆಲವು ಮುಸ್ಲಿಂ ಕಥೆಗಾರರು ಬಂದರು. ಅವರೆಲ್ಲರೂ ಚೆನ್ನಾಗಿ ಬರೀತಾರೆ. ಆದರೆ ಅವರೆಲ್ಲರಲ್ಲಿಯೂ ಓದಿನ ಕೊರತೆ ಕಾಣುತ್ತದೆ. ಓದದಿದ್ದರೆ ಏನು ಬರೀಲಿಕ್ಕೆ ಸಾಧ್ಯ? ಓದುವುದನ್ನು ನೆಗ್ಲೆಕ್ಟ್ ಮಾಡಿ ಬರೆಯಲಿಕ್ಕೆ ಹೊರಡುವುದು ಕುದುರೆಗೆ ಲಗಾಮು ಕಟ್ಟಿದ ಹಾಗೆ. ಮತ್ತೆ ಜಮಾತ್ ಎ ಇಸ್ಲಾಮಿಯಂಥ ಸಂಘಟನೆಗಳು ಅವರ ಮೇಲೆ ಪ್ರಭಾವ ಮಾಡಿರುತ್ತದೆ. ಆ ಪ್ರಭಾವದ ಚೌಕಟ್ಟಿನ ಒಳಗೆಯೇ ಬರೆಯುತ್ತಿರುವುದು ಕಂಡು ಬರುತ್ತದೆ. ಅದು ಅಪಾಯ. ನಾವು ಮುಕ್ತವಾಗಿ, ಯಾವುದೇ ಬಂಧನಕ್ಕೆ ಒಳಗಾಗದೇ ಬರೀಲಿಕ್ಕೆ ಸಾಧ್ಯವಾದರೆ ನಮ್ಮ ಉಡುಪಿ, ಮಂಗಳೂರು ಕಡೆ ಬರಹಗಾರರು ಇನ್ನಷ್ಟು ಚೆನ್ನಾಗಿ ಬರೀಲಿಕ್ಕೆ ಸಾಧ್ಯವಾಗುತ್ತದೆ.

ನಮ್ಮ ಬದುಕಿನ ದಟ್ಟವಾದ ಅನುಭಗಳನ್ನು ಯಾವುದೇ ರಾಜಕೀಯ ಮತ್ತು ಕೇವಲ ಧಾರ್ಮಿಕ ನಂಬಿಕೆಗಳ ಚೌಕಟ್ಟಿನೊಳಗೆ ಹೇಳಲಿಕ್ಕೆ ಪ್ರಯತ್ನ ಮಾಡುವುದು ತುಂಬ ಆತಂಕಕಾರಿಯಾದದ್ದು. ಅದು ಕಥೆಗಾರನ ಬೆಳವಣಿಗೆಗೆ ಸಹಕಾರಿ ಆಗಿರೋದಿಲ್ಲ.

❖


## ನಿಮ್ಮ ನೆಚ್ಚಿನ 'ಮಯೂರ'ವನ್ನು ಅಂಚೆಯ ಮೂಲಕವೂ ತರಿಸಿಕೊಳ್ಳಬಹುದು

ನೀವು ಕಳುಹಿಸುವ ಡಿ.ಡಿ. 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'– ಹೆಸರಿಗೆ ಇರಬೇಕು. ನೇರವಾಗಿ ಖಾತೆಗೆ ಹಣ ಕಳುಹಿಸುವವರು ಬೆಂಗಳೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಹಾತ್ಮ ಗಾಂಧಿ ರಸ್ತೆ ಶಾಖೆಯ ಖಾತೆ ಸಂಖ್ಯೆ 64018861169ಗೆ ಜಮಾ ಮಾಡಬಹುದು. ಬ್ಯಾಂಕ್ ಐಎಫ್‌ಎಸ್‌ಸಿ ಕೋಡ್ SBIN0040006




ಚಂದಾ ಕಳುಹಿಸುವವರು ತಮ್ಮ ವಿಳಾಸ, ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಬೇಕು

**ಚಂದಾ ವಿವರ (ಅಂಚೆ ವೆಚ್ಚ ಸೇರಿ)**

**ದೇಶದ ಒಳಗೆ**

ವಾರ್ಷಿಕ: **300.00** (12 ಸಂಚಿಕೆಗಳಿಗೆ)

ಅರ್ಧ ವಾರ್ಷಿಕ **150.00** (6 ಸಂಚಿಕೆಗಳಿಗೆ)

**ವಿದೇಶಗಳಿಗೆ**

ವಾರ್ಷಿಕ: **1500.00** (12 ಸಂಚಿಕೆಗಳಿಗೆ)

ಅರ್ಧ ವಾರ್ಷಿಕ **750.00** (6 ಸಂಚಿಕೆಗಳಿಗೆ)



**ಪ್ರಸರಣ ವಿಭಾಗ**
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್,
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು– 560 001
**ದೂರವಾಣಿ** : 080–25880199, 219
**ಇ-ಮೇಲ್:**
circulation–blore@deccanherald.co.in